157ನೇ ಪ್ರ = 97
ನಿ-330
4KK

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ಎಸ್.ವ್ಹಿ. ಸಂಕನೂರ, ಶ್ರೀ ಪುಟ್ಟಣ್ಣ, ಶ್ರೀ ಎಸ್.ಎಲ್. ಭೋಜೇಗೌಡ ಹಾಗೂ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಇವರುಗಳು ನಿಯಮ 330ರ ಮೇರೆಗೆ ಪ್ರಸ್ತಾಪಿಸಿರುವ ಸೂಚನೆ ಸಂ.97 ಕ್ಕೆ ಉತ್ತರ.**

ಪ್ರಶ್ನೆ:

ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಗೆ ಮಂಜೂರ ಆಗಿರುವ 175 ಕೋಚಸ್ (Coaches) ಹುದ್ದೆಗಳನ್ನು ತುಂಬುವಾಗ, ಕರ್ನಾಟಕ ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೋಚಸ್‌ಗಳಿಗೆ ವಯೋಮಿತಿ ಹಾಗೂ ವಿದ್ಯಾ ಅರ್ಹತೆ ಸಡಿಲಿಸಿ ಹಾಗೂ ಕೃಪಾಂಕ ನೀಡಿ ನೇಮಕಾತಿ ಮಾಡುವ ಬಗ್ಗೆ ಪ್ರಸ್ತಾಪಿಸುವುದು.

**ಉತ್ತರ:**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ 05 ಸಹಾಯಕ ನಿರ್ದೇಶಕರ ಹುದ್ದೆಗಳ ಮತ್ತು 176 ತರಬೇತುದಾರರು ಕಂ ಸಂಯೋಜಕರು ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕೆಳಕಂಡಂತೆ ಅವಕಾಶ ಕಲ್ಪಿಸಿದೆ:

1. **ಸಹಾಯಕ ನಿರ್ದೇಶಕರು ವೃಂದದ ಆಯ್ಕೆ:** ನೇರ ನೇಮಕಾತಿಗೆ ಗುರುತಿಸಲಾದ ಸಹಾಯಕ ನಿರ್ದೇಶಕರ ವೃಂದದ ಒಟ್ಟು 20 ಹುದ್ದೆಗಳಲ್ಲಿ 05 ಹುದ್ದೆಗಳನ್ನು ಅನುಭವಿ ತರಬೇತುದಾರರ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಿದ್ದು, ಇತರೆ ಅರ್ಹತೆ ಮತ್ತು ಸೂಕ್ತತೆಗಳೊಂದಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ 12 ವರ್ಷ ಸೇವೆ ಸಲ್ಲಿಸಿರುವುದನ್ನು ಅರ್ಹತೆಯಾಗಿ ಪರಿಗಣಿಸಲಾಗಿದೆ. ಸಾಮಾನ್ಯ ನೇಮಕಾತಿ ನಿಯಮ 1977ರ ನಿಯಮಗಳಲ್ಲಿ GM-35,OBC-38,SC/ST-40 ವಯೋಮಿತಿ ನಿಗದಿಪಡಿಸಿದೆ (ದಿನಾಂಕ:29.09.2025ರ ಸರ್ಕಾರದ ಆದೇಶದಲ್ಲಿ ದಿನಾಂಕ:31.12.2027ರ ವರೆಗೆ ನೇರ ನೇಮಕಾತಿಗಾಗಿ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಆಯಾ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಟ ವಯೋಮಿತಿಯಲ್ಲಿ ಒಂದು ಬಾರಿಯ ಕ್ರಮವಾಗಿ ಮೂರು ವರ್ಷಗಳ ಸಡಿಲಿಕೆ ನೀಡಿದೆ). ಆದರೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತರಬೇತುದಾರರಿಗೆ 52 ವರ್ಷಗಳ ಗರಿಷ್ಟ ವಯೋಮಿತಿಯನ್ನು ನಿಗದಿಪಡಿಸಿ ವಯೋಮಿತಿಗೆ ಸಡಿಲಿಕೆ ನೀಡಲಾಗಿದೆ.

2. **ತರಬೇತುದಾರರು ವೃಂದದ ಆಯ್ಕೆ:** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತರಬೇತುದಾರರು ಕಂ ಸಂಯೋಜಕರು ಹುದ್ದೆಗಳನ್ನು 03 ವೃಂದಗಳಾಗಿ ವಿಂಗಡಿಸಿದ್ದು, ಈ 176 ಹುದ್ದೆಗಳನ್ನು ಭರ್ತಿಮಾಡಲು ಇತರೆ ಅರ್ಹತೆ ಮತ್ತು ಸೂಕ್ತತೆಗಳೊಂದಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ 12 ವರ್ಷ, 07ವರ್ಷ ಮತ್ತು 03ವರ್ಷಗಳ ಸೇವೆ ಸಲ್ಲಿಸಿರುವುದನ್ನು ಅರ್ಹತೆಯಾಗಿ ಪರಿಗಣಿಸಲಾಗಿದೆ. ಸಾಮಾನ್ಯ ನೇಮಕಾತಿ ನಿಯಮ 1977ರ ನಿಯಮಗಳಲ್ಲಿ GM-35,OBC-38,SC/ST-40 ವಯೋಮಿತಿ ನಿಗದಿಪಡಿಸಿದೆ (ದಿನಾಂಕ:29.09.2025ರ ಸರ್ಕಾರದ ಆದೇಶದಲ್ಲಿ ದಿನಾಂಕ:31.12.2027ರ ವರೆಗೆ ನೇರ ನೇಮಕಾತಿಗಾಗಿ ಎಲ್ಲಾ ಪ್ರವರ್ಗಗಳ ಅಭ್ಯರ್ಥಿಗಳಿಗೆ ಆಯಾ ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಟ ವಯೋಮಿತಿಯಲ್ಲಿ ಒಂದು ಬಾರಿಯ ಕ್ರಮವಾಗಿ ಮೂರು ವರ್ಷಗಳ ಸಡಿಲಿಕೆ ನೀಡಿದೆ). ಆದರೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ತರಬೇತುದಾರರಿಗೆ ಗರಿಷ್ಟ ವಯೋಮಿತಿಯನ್ನು ತಾಲ್ಲೂಕು ಹಿರಿಯ ತರಬೇತುದಾರರು ಕಂ ಸಂಯೋಜಕರ ಹುದ್ದೆಗೆ 52 ವರ್ಷ ಮತ್ತು ತಾಲ್ಲೂಕು ಕಿರಿಯ ತರಬೇತುದಾರರು ಕಂ ಸಂಯೋಜಕರು (ಗ್ರೇಡ್-1 & ಗ್ರೇಡ್-2) ಹುದ್ದೆಗೆ 50 ವರ್ಷಗಳಿಗೆ ನಿಗದಿಪಡಿಸಿ, ವಯೋಮಿತಿಗೆ ಸಡಿಲಿಕೆ ನೀಡಲಾಗಿದೆ.

3. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕೃಪಾಂಕ ನೀಡುವ ವ್ಯವಸ್ಥೆ ಇರುವುದಿಲ್ಲ.
4. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ W.P. ಸಂಖ್ಯೆ:19904/2024 ರಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ದಿನಾಂಕ:26-07-2024 ರ ಮಧ್ಯಂತರ ಆದೇಶದಲ್ಲಿ 157 ತಾಲ್ಲೂಕು ಕಿರಿಯ ತರಬೇತುದಾರರು ಕಂ ಸಂಯೋಜಕರ ಹುದ್ದೆಗಳ ಪೈಕಿ 25 ತರಬೇತುದಾರರ ಹುದ್ದೆಗಳನ್ನು ಹೊರತುಪಡಿಸಿ, ಉಳಿದ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲು ಕ್ರಮವಹಿಸುವಂತೆ ಆದೇಶಿಸಿದೆ. ನೇಮಕಾತಿ ಸಂದರ್ಭದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಪಾಲಿಸಲಾಗುವುದು.

**ವೈಎಸ್‌ಡಿ-ಸಿಡಿಎನ್/568/2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ